# ಶಿವಮೊಗ್ಗ ಮಿಡ್‌ಟೌನ್ ರೋಟರಿ ಚಾರಿಟಿ ಫೌಂಡೇಶನ್‌ನ ಶಾಶ್ವತ ಯೋಜನೆಗಳು

BLOOD CENTRE

ಶಿವಮೊಗ್ಗ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಜನತೆಗೆ ಜೀವವಾಹಿನಿಯ ರೂಪದಲ್ಲಿ ಮೈದಳೆದ ರೋಟರಿ ರಕ್ತನಿಧಿ, ಮಿಡ್‌ಟೌನ್ ರೋಟರಿಯ ಹೆಮ್ಮೆಯ ಕಾಣಿಕೆ. 30 ವರ್ಷಗಳ ಸಾರ್ಥಕ ಸೇವೆಯಲ್ಲಿ ಅತ್ಯಂತ ಶಿಸ್ತಿನ ಅಚ್ಚುಕಟ್ಟಾದ ವ್ಯವಸ್ಥೆಯೊಂದಿಗೆ ಇದುವರೆಗೆ 3.5 ಲಕ್ಷ ಯುನಿಟ್ ರಕ್ತದಾನ ಪಡೆದಿದ್ದು 3.80 ಲಕ್ಷ ಯುನಿಟ್ ರಕ್ತವನ್ನು ಸೂಕ್ತ ಪರೀಕ್ಷೆಯೊಂದಿಗೆ ಅರ್ಹರಿಗೆ ನೀಡಲಾಗಿದ್ದು ರಾಜ್ಯದಲ್ಲಿ ಪ್ರತಿಷ್ಠಿತ ರಕ್ತನಿಧಿ ಎಂದು ಹೆಸರಾಗಿದೆ.

DIABETIC SELF CARE

ಮಧುಮೇಹಿಗಳಿಗೆ ಜೀವನದಲ್ಲಿ ಹೊಸ ಆಸಕ್ತಿ ಮೂಡಿಸಲು, ದೇಹದಲ್ಲಿನ ವೈಪರಿತ್ಯಗಳ ಬಗ್ಗೆ ಮಾಹಿತಿ ನೀಡಲು ಹಾಗೂ ಮಧುಮೇಹಿಯೊಂದಿಗೆ ನಿರಾಯಾಸ ಜೀವನ ನಡೆಸುವ ಬಗ್ಗೆ ನೂತನ ಆವಿಷ್ಕಾರಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಉದ್ದೇಶದಿಂದ ಸ್ಥಾಪಿತವಾದ ಮಿಡ್‌ಟೌನ್ ಡಯಾಬಿಟೀಸ್ ಸೆಲ್ಫ್‌ಕೇರ್ ಫೌಂಡೇಷನ್, 25 ವರ್ಷಗಳನ್ನು ಪೂರೈಸಿದ್ದು 250 ಕ್ಕೂ ಹೆಚ್ಚಿನ ಸದಸ್ಯರು (Type 2) ಹಾಗೂ 125 ಕ್ಕೂ ಹೆಚ್ಚಿನ ಜ್ಯುವೆನೆಲ್ (Type 1) ಸದಸ್ಯರಿಗೆ ಸೇವೆ ಸಲ್ಲಿಸುತ್ತಿದೆ.

ROTARY EYE BANK

ದಾನಗಳಲ್ಲಿ ಅತಿ ಶ್ರೇಷ್ಟವಾದ ನೇತ್ರದಾನಕ್ಕೆ ರೋಟರಿ ನೇತ್ರನಿಧಿ ಒಂದು ಹೊಸ ಆಯಾಮವನ್ನೇ ಹುಟ್ಟುಹಾಕಿದೆ. ನೇತ್ರದಾನ ಸ್ವೀಕರಣೆ ಹಾಗೂ ನೇತ್ರಗಳ ಅಳವಡಿಕೆಯಲ್ಲಿ ರಾಜ್ಯಕ್ಕೆ ಮಾದರಿ ನೇತ್ರ ನಿಧಿಯನಿಸಿದ ಸಂಸ್ಥೆ 2004 ರಿಂದ ಇಲ್ಲಿಯವರೆಗೆ 1500 ಕ್ಕೂ ಹೆಚ್ಚಿನ ನೇತ್ರದಾನವನ್ನು ಸ್ವೀಕರಿಸಿದ್ದು, 500 ಅಂಧರಿಗೆ ನೇತ್ರಗಳ ಅಳವಡಿಕೆ ನಡೆಸಿ ಅವರ ಬಾಳಿಗೆ ಬೆಳಕು ನೀಡಿದ ಹೆಗ್ಗಳಿಕೆ

ಮಲೆನಾಡು ಅಪಸ್ಮಾರ ಸಂಘ

ಸಹ್ಯಾದ್ರಿ ನರ ಹಾಗೂ ಮಾನಸಿಕ ರೋಗ ತಜ್ಞರ ಸಂಘದ ಸಹಯೋಗದೊಂದಿಗೆ ಪ್ರಾರಂಭವಾದ ಎಪಿಲೆಪ್ಸಿ ಕೇಂದ್ರ ಕಳೆದ 22 ವರ್ಷಗಳಿಂದ ಮೂರ್ಛೆ ಹಾಗೂ ನರರೋಗಿಗಳಿಗೆ ಸಕಾಲಿಕ ತಪಾಸಣೆ ಹಾಗೂ ನಿರಂತರ ಔಷಧೋಪಚಾರಗಳ ಬಗ್ಗೆ ಯಶಸ್ವಿ ಶಿಬಿರಗಳನ್ನು ಆಯೋಜಿಸುತ್ತಿದೆ.

ಕರ್ನಾಟಕ ಹಿಮೋಫಿಲಿಯಾ ಸೊಸೈಟಿ

ರಕ್ತ ಹೆಪ್ಪುಗಟ್ಟುವಿಕೆಯಲ್ಲಿನ ವೈಫಲ್ಯತೆ, ವೈಚಿತ್ರಗಳ ಸಲಹೆ ಹಾಗೂ ಮಾರ್ಗದರ್ಶನ ಮತ್ತು ಸುರಕ್ಷಿತ ರಕ್ತಪೂರೈಕೆ - ಈ ಎಲ್ಲಾ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಮಲೆನಾಡು ಹಿಮೋಫಿಲಿಯಾ ಕೇರ್ ಸೆಂಟರ್‌ನ ಸಹಯೋಗದೊಂದಿಗೆ ಕಳೆದ 22 ವರ್ಷಗಳಿಂದ ಯಶಸ್ವಿ ಕಾರ್ಯಾಚರಣೆ.

ಸಿ.ಪಿ.ಆರ್. ತರಬೇತಿ ಕೇಂದ್ರ

ಹೃದಯಾಘಾತ, ಉಸಿರಿನ ತೊಂದರೆಗಳಂತಹ ಆಕಸ್ಮಿಕ ಸಂದರ್ಭಗಳಲ್ಲಿ ಪ್ರಥಮ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಲು ಅತ್ಯಾಧುನಿಕ ಸಲಕರಣೆಗಳೊಂದಿಗೆ ತಜ್ಞವೈದ್ಯರ ತಂಡದಿಂದ ಸಂಘ ಸಂಸ್ಥೆಗಳಿಗೆ, ವಿದ್ಯಾರ್ಥಿ ಸಮುದಾಯಕ್ಕೆ ಉಚಿತ ತರಬೇತಿ ಸೌಲಭ್ಯ ನೀಡಲು ರೋಟರಿ ಸಿ.ಪಿ.ಆರ್. ತರಬೇತಿ ಕೇಂದ್ರ ಶ್ರಮಿಸುತ್ತಿದೆ.



**BIRTHDAY Greetings to**

Rtn. Soubhagya Kiran — Jul-01



**MARRIAGE ANNIVERSARY Greetings to**

Rtn. Dr. Dhananjaya K.B. — Jul-01
Ann. Amitha

**4 WAY TEST**

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS?**
4. Will it be **BENEFICIAL** to all concerned?

Printed at : A.S.R. Offset Printers, #4, Darga Complex, Tilak Nagara Main Road, SHIVAMOGGA-577201 Mob : 7975551457

Rotary 2026-27

ಮಿಡ್‌ಟೌನ್ ನ್ಯೂಸ್

# Midtown News

Club No 21853 | Charter Date : 16.05.1984 | Zone : 10 | R.I Dist. 3182

In House Bulletin of Rotary Club Shimoga Mid Town

ಟೀಂ ಸ್ಪಂದನ | TEAM SPANDANA


R.I. President : Rtn. Olayinka H. Babalola
Dist. Governor : Rtn. B.M. Bhat
Asst. Governor : Rtn. Teerthaiah K.H.
President : Rtn. Dr. Sridhara S.
Secretary : Rtn. Ujwala B.S.
Director : Rtn. Dr. Ramesh R.
Editor : Rtn. Meera Nadig
Members : Rtn. Anand I.R., Rtn. Preethi Deepak
Rtn. Shilpa H.G., Rtn. Dr. Zeenath Ambareen



We meet every Thursday at
Rotary Midtown Hall, SHIVAMOGGA-577201

rotaryshimogamidtown@gmail.com

Vol. 43 2-7-2026 Issue 1



## ಅಧ್ಯಕ್ಷರ ನುಡಿ

ಅಧ್ಯಕ್ಷರ ಆಶಯ,

ರೋಟರಿ ಮಿಡ್‌ಟೌನ್ ಶಿವಮೊಗ್ಗದ 2026–27ನೇ ಸಾಲಿನ ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ,ಸೇವೆ, ಸ್ನೇಹ ಮತ್ತು ಸಂಘಟನೆಯ ಬೆಳವಣಿಗೆಯ ಹೊಸ ಅಧ್ಯಾಯಕ್ಕೆ ಮುನ್ನಡಿ ಬರೆಯುವ ಅವಾಕಾಶ ದೊರೆತಿರುವುದು ನನಗೆ ಸಂತೋಷ ಹಾಗೂ ಹೆಮ್ಮೆಯ ವಿಷಯವಾಗಿದೆ.

ರೋಟರಿಯ ಯಶಸ್ಸಿನ ಮೂಲ ಆದರ ಸದಸ್ಯರು. ಆದ್ದರಿಂದ ಈ ವರ್ಷ ಸದಸ್ಯರ ನಡುವೆ ಪರಸ್ಪರ ವಿಶ್ವಾಸ, ಸ್ನೇಹ ಮತ್ತು ಆತ್ಮೀಯತೆಯನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ, ಪ್ರತಿಯೊಬ್ಬ ಸದಸ್ಯರೂ ಕ್ಲಬ್‌ನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತಹ ವಾತಾವರಣವನ್ನು ನಿರ್ಮಿಸುವುದು ನನ್ನ ಪ್ರಮುಖ ಆಶಯವಾಗಿದೆ. ರೋಟರಿ ಸದಸ್ಯರು ಮತ್ತು ಅದರ ಕುಟುಂಬಗಳ ನಡುವೆ ಉತ್ತಮ ಬಾಂಧವ್ಯ ಬೆಳೆಸುವ ಮೂಲಕ ಒಂದು ಸಮಗ್ರ ರೋಟರಿ ಕುಟುಂಬವನ್ನು ರೂಪಿಸಲು ಬಯಸುತ್ತೇನೆ.

ಈ ಸಾಲಿನಲ್ಲಿ ರೋಟರಿಯ ಐದು ಸೇವಾ ಮಾರ್ಗಗಳಾದ ಕ್ಲಬ್ ಸೇವೆ (Club Service), ವೃತ್ತಿ ಸೇವೆ (Vocational Service), ಸಮುದಾಯ ಸೇವೆ (Community Service), ಅಂತರರಾಷ್ಟ್ರೀಯ ಸೇವೆ (International Service) ಹಾಗೂ ಯುವ ಸೇವೆ (Youth Service) ಕ್ಷೇತ್ರಗಳಲ್ಲಿ ಸಮತೋಲಿತ ಮತ್ತು ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸುವ ಸಂಕಲ್ಪ ಹೊಂದಿದ್ದೇನೆ. ಪ್ರತಿಯೊಂದು ಸೇವಾ ಮಾರ್ಗವು ನಮ್ಮ ಸದಸ್ಯರ ವ್ಯಕ್ತಿತ್ವ ವಿಕಾಸಕ್ಕೆ ಹಾಗೂ ಸಮಾಜದ ಒಳಿತಿಗೆ ಪೂರಕವಾಗುವಂತೆ ಕಾರ್ಯ ನಿರ್ವಹಿಸಬೇಕೆಂಬುದು ನನ್ನ ಆಶಯ.

ಅದೇ ರೀತಿ ರೋಟರಿ ಇಂಟರ್‌ನ್ಯಾಷನಲ್‌ನ ಏಳು ಕೇಂದ್ರೀಕೃತ ಕಾರ್ಯಕ್ಷೇತ್ರಗಳಾದ ಶಾಂತಿ ನಿರ್ಮಾಣ ಮತ್ತು ಸಂಘರ್ಷ ನಿವಾರಣೆ, ರೋಗ ನಿರೋಧಕತೆ ಮತ್ತು ಚಿಕಿತ್ಸೆ, ನೀರು–ನೈರ್ಮಲ್ಯ ಮತ್ತು ಸ್ವಚ್ಛತೆ, ತಾಯಿ ಮತ್ತು ಮಗುವಿನ ಆರೋಗ್ಯ, ಮೂಲಭೂತ ಶಿಕ್ಷಣ ಮತ್ತು ಸಾಕ್ಷರತೆ, ಸಮುದಾಯ ಆರ್ಥಿಕ ಅಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆ ಕ್ಷೇತ್ರಗಳಲ್ಲಿ ಅರ್ಥಪೂರ್ಣ ಮತ್ತು ಸಮಾಜಮುಖಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.

ನಮ್ಮ ಸೇವಾ ಚಟುವಟಿಕೆಗಳು ಕೇವಲ ವಾರ್ಷಿಕ ಚಟುವಟಿಕೆಗಳಾಗಿ ಉಳಿಯದೆ, ಸಮಾಜದ ಮೇಲೆ ದೀರ್ಘಕಾಲದ ಸಕಾರಾತ್ಮಕ ಪರಿಣಾಮ ಬೀರುವಂತಾಗಬೇಕು. “Create Lasting Impact” ಧ್ಯೇಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಶಿಕ್ಷಣ, ಆರೋಗ್ಯ, ಪರಿಸರ ಮತ್ತು ಸಮುದಾಯ ಸಬಲೀಕರಣ ಕ್ಷೇತ್ರಗಳಲ್ಲಿ ಶಾಶ್ವತ ಬದಲಾವಣೆಯನ್ನು ತರುವ ಯೋಜನೆಗಳಿಗೆ ಆದ್ಯತೆ ನೀಡಲು ಬಯಸುತ್ತೇನೆ.

ರೋಟರಿ ಮಿಡ್‌ಟೌನ್ ಶಿವಮೊಗ್ಗವು ಕಳೆದ ಹಲವು ವರ್ಷಗಳಿಂದ ಸೇವೆ, ಸ್ನೇಹ ಮತ್ತು ಸಮಾಜಮುಖಿ ಚಟುವಟಿಕೆಗಳ ಮೂಲಕ ವಿಶಿಷ್ಟ ಪರಂಪರೆಯನ್ನು ನಿರ್ಮಿಸಿದೆ. ಆ ಸುವರ್ಣ ಪರಂಪರೆಯನ್ನು ಮುಂದುವರೆಸುತ್ತಾ, ಹೊಸ ಚಿಂತನೆಗಳು ಮತ್ತು ಅರ್ಥಪೂರ್ಣ ಯೋಜನೆಗಳೊಂದಿಗೆ ಕ್ಲಬ್ಬನ್ನು ಇನ್ನಷ್ಟು ಉತ್ತಮ ಮಟ್ಟಕ್ಕೆ ಕೊಂಡೊಯ್ಯುವುದು ನನ್ನ ಆಶಯವಾಗಿದೆ. ಪ್ರತಿಯೊಬ್ಬ ರೊಟೇರಿಯನ್ನರ ಸಹಕಾರ, ಮಾರ್ಗದರ್ಶನ ಮತ್ತು ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಈ ವರ್ಷವನ್ನು ಮತ್ತಷ್ಟು ಸಾರ್ಥಕ, ಪರಿಣಾಮಕಾರಿ ಮತ್ತು ಸ್ಮರಣೀಯವಾಗಿಸೋಣ.

ಸೇವೆ ನಮ್ಮ ಧ್ಯೇಯ, ಸ್ನೇಹ ನಮ್ಮ ಶಕ್ತಿ, ಸಮಾಜದ ಅಭಿವೃದ್ಧಿ ನಮ್ಮ ಗುರಿ

**ರೊ. ಡಾ|| ಶ್ರೀಧರ ಎಸ್.**
ಅಧ್ಯಕ್ಷರು 2026–27



## Secretary’s Note

Dear Rotarians,

Guided by Rotary’s motto, “Service Above Self,” I humbly accept the responsibility of serving as the Secretary of our club for the Rotary Year 2026–27. Inspired by the message of the Rotary International President, I believe that the 365 days ahead provide us with a golden opportunity to create a lasting impact in our community through meaningful service, fellowship, and dedication. I look forward to working closely with our President, Board Members, and fellow Rotarians to strengthen our service initiatives and make a positive difference in the lives of those we serve. Together, let us uphold Rotary’s values and continue our journey of service with commitment and enthusiasm.

**Rtn. Ujwala B.S.**
Secretary 2026-27



## ನಿಕಟ ಪೂರ್ವ ಅಧ್ಯಕ್ಷರ ನುಡಿ

ರೋಟರಿಯ ರಥ–ಸೇವೆಯಿಂದ ಸಾರ್ಥಕತೆಯತ್ತ. ಒಂದು ವರ್ಷದ ಅವಧಿ ಕ್ಯಾಲೆಂಡರ್‌ನಲ್ಲಿ ಕೇವಲ 365 ದಿನಗಳಾಗಿರಬಹುದು. 2025–26ನೇ ಸಾಲಿನಲ್ಲಿ”Unite for Good” ಎಂಬ ಧ್ಯೇಯವಾಕ್ಯದೊಂದಿಗೆ ನಮ್ಮ ರೋಟರಿ ಕ್ಲಬ್ ಶಿವಮೊಗ್ಗ ಮಿಡ್‌ಟೌನ್ ಸಮಾಜದ ಒಳಿತಿಗಾಗಿ ಒಂದೇ ಕುಟುಂಬವಾಗಿ ಕೆಲಸ ಮಾಡಿತು.

ಒಂದು ವರ್ಷದಲ್ಲಿ 75 ಕ್ಲಬ್ ಸರ್ವೀಸ್ ಆಟುವಟಿಕೆಗಳು, 100 ಸಮುದಾಯ ಸೇವಾ ಯೋಜನೆಗಳು, 85 ವೃತ್ತಿಪರ ಸೇವಾ ಕಾರ್ಯಕ್ರಮಗಳು, 60 ನ್ಯೂ ಜನರೇಷನ್ ಚಟುವಟಿಕೆಗಳು, 5 ಅಂತರರಾಷ್ಟ್ರೀಯ ಸೇವಾ ಯೋಜನೆಗಳು ಮತ್ತು 150 ಸಾರ್ವಜನಿಕ ಚಿತ್ರಣ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು. ಈ ಎಲ್ಲಾ ಕಾರ್ಯಕ್ರಮಗಳು 7,822 ಫಲಾನುಭವಿಗಳು ನೇರವಾಗಿ ಪ್ರಯೋಜನ ಪಡೆದರು. ಸುಮಾರು 65% ಸದಸ್ಯರ ಹಾಜರಾತಿ ನಮ್ಮ ಕ್ಲಬ್‌ನ ಒಗ್ಗಟ್ಟು ಮತ್ತು ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. 365 ದಿನಗಳ ಸೇವೆ ಮುಗಿದಿರಬಹುದು... ಆದರೆ ಸೇವೆಯ ಪರಂಪರೆ ಎಂದೆಂದಿಗೂ ಮುಂದುವರಿಯುತ್ತದೆ. ಈಗ ಹೊಸ ನಾಯಕತ್ವ ಹೊಸ ಕನಸುಗಳೊಂದಿಗೆ ಪಯಣ ಆರಂಭಿಸಿದೆ. ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಅವರು ಇನ್ನಷ್ಟು ಎತ್ತರದ ಸಾಧನೆಗಳನ್ನು ನಿರ್ಮಿಸಲಿ, ನಮ್ಮ ಕ್ಲಬ್ ಸೇವೆಯಲ್ಲಿ ಹೊಸ ಮೈಲಿಗಲ್ಲುಗಳನ್ನು ಸ್ಥಾಪಿಸಲಿ ಎಂಬುದು ನನ್ನ ಹಾರೈಕೆ.

**- ರೊ. ಹರ್ಷ ಬಿ. ಕಾಮತ್**



## Out Going Secretary’s Message


Dear Rotarians,

It was my pride and pleasure to be part of one of the vibrant Rotary clubs in Shimoga. Indeed it was wonderful year and made army of friends among Rotary clubs. I thank our President for choosing me as Club Secretary, I hope has delivered to the best of my abilities. I thank our Board members, Rotarians, Ann & Annet’s for their continued support during our tenure.

**- Rtn. R.N. Manjunath**

## RI PRESIDENT'S MESSAGE

Dear friends,



Rotary has changed my life, and I'm willing to bet that it has changed yours too. It expands our world, enriches our understanding of service, creates international friendships, and grounds us. It teaches us to see, to look beyond ourselves.

Think about our Vision Statement: Together, we see a world where people unite and take action to create lasting change—across the globe, in our communities, and in ourselves.

Those final words of our Vision Statement are at the heart of what it means to Create *Lasting Impact*. We often share how Rotary inspires lasting change in others, but we rarely discuss how it transforms us. We must consider how Rotary has changed our lives and share our stories widely. If we can do that, we will engage current members, expand our reach, and forge exciting connections with like-minded partners.

We must embrace Rotary's global diversity and build a welcoming culture, one where fresh perspectives are embraced, new ideas are celebrated, and differences are met with curiosity and kindness instead of judgement. If we can do that, we will meet our membership goals and continue to grow.

And finally, we must reaffirm our commitment to service. We must think bigger, understanding our struggles as interconnected and leveraging our connections to make global progress. If we can do that, we will be one step closer to a world free of polio, a world where everyone has access to clean water and a quality education—a world at peace.

Let us continue to inspire one another and seek innovative solutions to some of the world's most pressing challenges. I look forward to working alongside you in service.

Warm regards,
**Rtn. Olayinka H. Babalola**
R.I. President,2026-27



### ಸಂಪಾದಕರ ನುಡಿ

ನನ್ನನ್ನು ಈ ಸಾಲಿನ ಬುಲಿಟಿನ್ ಕಮಿಟಿಯ ಚೇರ್ಮನ್ ಆಗಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಿರುವುದಕ್ಕೆ ಹೃತ್ಪೂರ್ವಕ ಸಂತೋಷ ವ್ಯಕ್ತ ಪಡಿಸುತ್ತೇನೆ. ಮಿಟ್‌ಟೌನ್ ನ್ಯೂಸ್ ಈ ವರ್ಷ ಪ್ರತಿ ತಿಂಗಳ ನಾಲ್ಕು ವಾರಗಳಲ್ಲಿ ಆಕರ್ಷಕವಾಗಿ ಹಾಗೂ ಮಾಹಿತಿ ಪೂರ್ಣವಾಗಿ ಪ್ರಕಟವಾಗುವಂತೆ ಪ್ರಯತ್ನಿಸಲಾಗುವುದು.

ಸದಸ್ಯರು ತಮ್ಮ ಉಪಯುಕ್ತ ಲೇಖನಗಳು, ಮಾಹಿತಿಗಳು ಹಾಗೂ ಜಾಹಿರಾತುಗಳನ್ನು ಸಕಾಲದಲ್ಲಿ ಕಳುಹಿಸಿ ಸಹಕರಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಈ ಕಾರ್ಯಕ್ಕನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ನಮ್ಮ ಕಮಿಟಿಯ ನಿರಂತರ ಸಹಕಾರ ಮತ್ತು ಮಾರ್ಗದರ್ಶನ ದೊರೆಯಲಿದೆ ಎಂಬ ವಿಶ್ವಾಸವಿದೆ.

ಧನ್ಯವಾದಗಳು

ರೊ. ಮೀರಾ ನಾಡಿಗ್

## DISTRICT GOVERNOR'S MESSAGE

Dear Friends,



In the esteemed and reputed social organization, Rotary International District 3182, you have given me the opportunity to serve as District Governor. I sincerely thank and congratulate each one of you for your trust and support.

First of all, I extend my warm wishes to all of you for a successful and impactful Rotary year 2026-27. Our International President, Olayinka Hakeem Babalola, has given us a very inspiring message for the year 2026-27 — "Create Lasting Impact."

This calls upon all of us to bring about meaningful, sustainable, and positive changes in society. I request every Rotarian to implement this message through all avenues of Rotary service, thereby strengthening Rotary's image and goodwill in the public.

In District 3182, every Rotarian possesses immense ability and talent. I urge each one of you to discover and showcase your inner potential through dedicated service and impactful projects.

Rotary-sponsored groups like Rotaract, Interact, and RCC are the future pillars of Rotary. Let us nurture them by sharing Rotary knowledge, encouraging leadership, and providing them with meaningful opportunities. Together, let us empower them to bring transformative change to society.

This year, we have identified four key District Projects:

1. Road Safety
2. Bala Vikas & Vikala Chetana
3. Swachhata Movement & Waste Management
4. Drug Eradication & Drug Awareness

I request all clubs to actively implement these projects for the benefit of society, especially for our younger generation.

My vision is to elevate District 3182 to greater heights with your wholehearted support and dedication. I urge all 86 clubs in our district to:

- Establish at least one Rotaract Club, two Interact Clubs, and one RCC
- Strengthen membership to reach 5,000 members, with a net increase of 1,000
- Encourage greater women participation in Rotary
- Contribute generously to the Rotary Foundation
- Increase Global Grants and enhance Rotary's public image


Let us work together with unity and commitment so that, by the end of this year, we witness real and lasting change in society. Wishing you all the very best for a meaningful Rotary year.

CREATE LASTING IMPACT

Warm regards,
**B. M. Bhat**
Dist. Governor 2026-27



# BOARD MEMBERS 2026-27
# ROTARY CLUB SHIMOGA MIDTOWN

| | | | | | | |
|---|---|---|---|---|---|---|
|  |  |  |  |  |  |  |
| Rtn. Dr. Sridhara S.<br>President | Rtn.Harsha B. Kamath<br>IPP | Rtn. Hariprasad S.<br>President Elect | Rtn.Anil P. Shetty<br>Vice President | Rtn. Ujwala B.S.<br>Secretary | Rtn.Veena Vishwanath<br>Joint Secretary | Rtn. Dr. Zeenath Ambareen<br>Treasurer |
|  |  |  |  |  |  |  |
| Rtn.Rajendra Prasad M.R.<br>Club Learning Facilitator | Rtn.Narahari R. Borker<br>Sergeant at Arms | Rtn. Dr. Ramesh R.<br>Club Service | Rtn. B.R. Amarnath<br>Vocational Service | Rtn. R.N. Manjunath<br>Community Service | Rtn. Raveendra Bennehalli<br>International Service | Rtn. Shwetha K.<br>Youth Service |

| | | | | | |
|---|---|---|---|---|---|
|  |  |  |  |  |  |
| Rtn. Gururaj S. Girimaji<br>Chairman<br>The Rotary Foundation (TRF) | Rtn. Raveendra Kumar K.<br>Chairman<br>Pulse Polio | Rtn. Fhaheem Hussain<br>Chairman<br>I.T. & Website | Rtn. Harsha B. Kamath<br>Chairman<br>Membership Development | Rtn.Dr. Vishnu Murthy K.A.<br>Chairman<br>Public Image & Relationship | Rtn. Murali M.<br>Chairman<br>District Project |

## MEMBERS SERVING BEYOND OUR CLUB 2026-27

| | |
|---|---|
| Rtn. Murali M. | District Chairman, AIDS Awareness & Prevention |
| Rtn. Uday Pete | District Vice Chairman, Finance Committee |
| Rtn. Gururaj S. Girimaji | District Vice Chairman, Strategic Planning |
| Rtn. Rajendra Prasad M.R. | Zone-10, Zonal Learning Facilitator |
| Rtn. H.N.S. Rao | Zone-10, Co-ordinator, District Project, Bala Vikas & Empowering Special Children |
| Rtn. Ravindrakumar K. | Zone-10 Co-ordinator, The Rotary Foundation (TRF) |
| Rtn. Anil P. Shetty | Zone-10, Co-ordinator, District Project, Road Safety Awareness |
| Rtn. Suresh Kumar D. | Zone-10, Co-ordinator, Disease Prevention & Treatment |
| Rtn. Harsha B. Kamath | Zone-10, Co-ordinator, Membership Development & External Extenion |
| Rtn. Meera Nadig | Zone-10, Co-ordinator, Development of Women Membership |

## Treasurer's Note

Dear Fellow Rotarians,



It is with a deep sense of gratitude and responsibility that I accept the role of Club Treasurer for the Rotary Year 2026-27. Since joining our wonderful Rotary family in 2022, I have witnessed firsthand the incredible impact of our collective efforts, and I am honored to step into this leadership position on the upcoming Board.

In my professional life as a pediatric dentist, precision, care, and safeguarding the future are at the core of everything I do. I look forward to bringing that same dedication, transparency, and meticulous stewardship to our club's finances. My primary goal will be to ensure that our resources are managed effectively, supporting our meaningful projects and maximizing our impact both locally and globally. I would like to extend my heartfelt thanks to the leadership and members of the club for placing your trust in me. Working alongside our incoming President and the new Board, I am confident that we will maintain the highest standards of financial integrity while fueling the passion and service that defines our club.

Thank you for this privilege to serve. Let us look forward to a rewarding and impactful year ahead.

Yours in Rotary,
**Rtn.Dr.Zeenath Ambareen**
Treasurer 2026-27